**ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 16-07-2018.**

<u>ಮುಂದುವರೆದ ಪಾಟೀ ಸವಾಲು ಶ್ರೀ ಕೆ.ಎನ್.ಎಸ್. ವಕೀಲರಿಂದಃ</u>

ದಿನಾಂಕಃ**10.01.1998** ರಲ್ಲಿ ನಮ್ಮ ಕುಟುಂಬದ ಸ್ವತ್ತುಗಳನ್ನು ಶಿವರಾಜೇಗೌಡ, ಕೃಷ್ಣೇಗೌಡ ದೇವರಾಜೇಗೌಡ ರವರು ಹಂಚಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. **1998** ರಲ್ಲಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದ್ದಾಗೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಖಾತೆಯನ್ನು ನಾನು ಪ್ರಶ್ನಿಸಿಲ್ಲ. ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆ **1998** ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ.

ನನ್ನ ಸಹೋದರ ದೇವರಾಜೇಗೌಡ **6** ನೇ ಪ್ರತಿವಾದಿ ತನ್ನ ಭಾಗಕ್ಕೆ ಬಂದ ಆಸ್ತಿಯನ್ನು ದಿನಾಂಕ **18.12.2000** ರಲ್ಲಿ ಆದಾರ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ದಿನಾಂಕಃ**13.01.2014** ರಂದು ಆದಾರ ಖಲಾಸೆ ಪತ್ರವನ್ನು ನನ್ನ ಯಜಮಾನರಿಂದ ಬರೆಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಿಶಾನೆ ಪಿ**-4** ರಲ್ಲಿ ನಮೂದಾಗಿರುವ ರಂಗೇಗೌಡ ಬಿನ್ ಕೆಂಪೇಗೌಡ ನನ್ನ ಚಿಕ್ಕಪ್ಪ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನನ್ನ ತಂದೆಯ ಸಹೋದರರು ಭಾಗವಾಗಿರುವ ಬಗ್ಗೆ ದಾಖಲಾತಿಗಳು ಇಲ್ಲ. ಸದರಿ ದಾವೆಯಲ್ಲಿ ನನ್ನ ತಂದೆಯ ಸಹೋದರರನ್ನು ಸೇರಿಸಿಲ್ಲ ಎಂದರೆ ಸರಿ. ನಿಶಾನೆ ಪಿ**-10** ರಿಂದ **38** ರ ದಾಖಲೆಗಳನ್ನು ಯಾವ ಉದ್ದೇಶಕ್ಕಾಗಿ ಹಾಜರುಪಡಿಸಿದ್ದೇನೆ ಎಂದು ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೆ ಭಾಗಾಂಶ ಇಲ್ಲ ಎಂದರೆ ಸರಿಯಲ್ಲ. ನನ್ನ ಭಾಗದ ಪ್ರತಿಫಲವಾಗಿ ನನ್ನ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಮದುವೆಯನ್ನು ನನ್ನ ತಂದೆ ಮಾಡಿದ್ದಾರೆ ಎಂದರೆ ಸರಿ.

<u>*ಮರು ವಿಚಾರಣೆ ಇಲ್ಲ.*</u>

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸ.ಇ.ಎ.ಒ.ಸ.ಮಾ,**

*(ಎಸ್.ಚಿನ್ನಸ್ವಾಮಿ)*
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
**ಚನ್ನರಾಯಪಟ್ಟಣ**